ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	643
ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ
ಉತ್ತರಿಸಬೇಕಾದ ದಿನಾಂಕ	:	22.02.2022
ಉತ್ತರಿಸಬೇಕಾದ ಸಚಿವರು	:	ನಗರಾಭಿವೃದ್ಧಿ ಸಚಿವರು

ಪ್ರಶ್ನೆ		ಉತ್ತರ
ಅ)	ಮೈಸೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರ ಸಂಖ್ಯೆ ಎಷ್ಟು;	ಪ್ರಸ್ತುತ ಮೈಸೂರು ಮಹಾನಗರಪಾಲಿಕೆಯಲ್ಲಿ 540 ಖಾಯಂ ಪೌರಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.
ಆ)	ಅವರಿಗೆ ನೀಡಲಾಗುತ್ತಿರುವ ತಲಾ ಮಾಸಿಕ ವೇತನವೆಷ್ಟು;	ಮೈಸೂರು ಮಹಾನಗರ ಪಾಲಿಕೆಯ 540 ಖಾಯಂ ಪೌರಕಾರ್ಮಿಕರಿಗೆ ಅವರ ವೇತನ ಶ್ರೇಣಿಗೆ ಅನುಗುಣವಾಗಿ ರೂ.17000-28950ಗಳನ್ನು ಖಾತೆಗೆ ಜಮಾ ಮಾಡಲಾಗುತ್ತಿದೆ.
ಇ)	ಗುತ್ತಿಗೆ ಆಧಾರದ ಮೇಲೆ / ದಿನಗೂಲಿ / ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸಂಖ್ಯೆ ಎಷ್ಟು ಹಾಗೂ ಅವರಿಗೆ ನೀಡಲಾಗುತ್ತಿರುವ ತಲಾ ಮಾಸಿಕ ವೇತನವೆಷ್ಟು;	ಪ್ರಸ್ತುತ ನೇರ ಪಾವತಿಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕ ಸಂಖ್ಯೆ:1609. ಪಾಲಿಕೆಯಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ ಪೌರಕಾರ್ಮಿಕರ ಪದ್ಧತಿಯನ್ನು ರದ್ದುಪಡಿಸಿ, ಪ್ರಸ್ತುತ ನೇರ ಪಾವತಿಯಡಿ ಕಾರ್ಮಿಕ ಇಲಾಖೆಯು ನಿಗಧಿಪಡಿಸ್ಥಿರುವ ಮೂಲ ವೇತನ + VDA ಸೇರಿ ರೂ. 15,121.20 + ಇಎಸ್ಐ 3.25 % + ಪಿಎಫ್ 13.00% ಮೊತ್ತವನ್ನು ಸೇರಿ ಮಾಸಿಕ ವೇತನವನ್ನು ಪಾಲಿಕೆ ವತಿಯಿಂದ ಪೌರಕಾರ್ಮಿಕರ ಖಾತೆಗೆ ಜಮಾ ಮಾಡಲಾಗುತ್ತಿದೆ.
ಈ)	ಸದರಿಯವರ ವೇತನವನ್ನು ಯಾವಾಗ ಪರಿಷ್ಕರಣೆ ಮಾಡಲಾಯಿತು.;	ಕಾರ್ಮಿಕ ಇಲಾಖೆಯು ಕಾಲ ಕಾಲಕ್ಕೆ ನಿಗಧಿಪಡಿಸುವ ವೇತನವನ್ನು ನೀಡಲಾಗುತ್ತಿದೆ.
ಉ)	ಪೌರಕಾರ್ಮಿಕರಿಗೆ ಕೊರತೆ ಇರುವ ಮೂಲಭೂತ ಸೌಲಭ್ಯಗಳೇನು; (ವಿವರಗಳನ್ನು ಒದಗಿಸುವುದು)	ಮೈಸೂರು ಮಹಾನಗರ ಪಾಲಿಕೆಯಲ್ಲಿ ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ವರದಿಯಾಗಿರುವುದಿಲ್ಲ.
ಊ)	ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಯಾವ ವಿಶೇಷ ಸವಲತ್ತುಗಳನ್ನು ನೀಡಲಾಗಿದೆ?	ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಪೌರಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಈ ಕೆಳಕಂಡಂತೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. • ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಸಮಾಜಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ 1 ರಿಂದ 10 ನೇ ತರಗತಿಯವರೆಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. • ಎಸ್.ಎಫ್.ಸಿ. ಮುಕ್ತನಿಧಿ ಹಾಗೂ ನಗರ ಸ್ಥಳೀಯ

ಸಂಸ್ಥೆಯ ನಿಧಿಯ ಶೇ.24.10% ಪರಿಶಿಷ್ಟ ಜಾತಿ/ಪಂಗಡದ ಎಸ್.ಸಿ.ಎಸ್.ಪಿ./ಟಿ.ಎಸ್.ಪಿ. ಕಲ್ಯಾಣ ಕಾರ್ಯಕ್ರಮದಡಿ ಪೌರಕಾರ್ಮಿಕರ ಮಕ್ಕಳಿಗೆ ಪ್ರಥಮ ಆದ್ಯತೆಯನ್ನು ನೀಡಿ ವಿವಿಧ ಹಂತಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ.

ತರಗತಿ	ಪ್ರತಿ ವಿದ್ಯಾರ್ಥಿಗೆ ನೀಡುವ ವಿದ್ಯಾರ್ಥಿ ವೇತನ (ರೂ.ಗಳಲ್ಲಿ)
ಎಸ್.ಎಸ್.ಎಲ್.ಸಿ.	3,000/-
ಪಿ.ಯು.ಸಿ. ಐ.ಟಿ.ಐ., ಡಿಪ್ಲೋಮೋ ಇತರೆ ವೃತ್ತಿಪರ ತರಬೇತಿ, ಪ್ಯಾರ ಮೆಡಿಕಲ್ ಕೋರ್ಸ್/ಡಿ.ಇಡಿ/ ಸಿ.ಪಿ.ಇಡಿ ಇತರೆ ತಾಂತ್ರಿಕ ತರಗತಿಗಳಿಗೆ	4,500/-
ಬಿ.ಎ, ಬಿ.ಎಸ್ಸಿ. ಬಿಕಾಂ. ಬಿಬಿಎಂ, ಬಿಸಿಎ ಬಿ.ಇಡಿ. / ಬಿ.ಪಿಇಡಿ ಇತರೆ ಪದವಿ	6,000/-
ಎಂ.ಇಡಿ / ಎಂಪಿಇಡಿ	9,000/-
ಎಂ.ಎ. ಎಂ.ಎಸ್ಸಿ. ಎಂ.ಕಾಂ., ಎಂ.ಎಸ್.ಡಬ್ಲ್ಯೂ, ಎಂ.ಸಿಎ.	15,000/-
ಇತರೆ ಇನ್ನಾವುದೇ ಸ್ನಾತಕೋತ್ತರ ಪದವಿ	10,000/-
ಬಿ.ಇ., ಎಂ.ಬಿ.ಬಿ.ಎಸ್., ಬಿ.ಡಿ.ಎಸ್. ಎಂ.ಟೆಕ್, ಎಂ.ಎಸ್. ಎಂ.ಡಿ. ಎಂ.ಇ	25,000/-
ಪಿ.ಹೆಚ್‌ಡಿ., ಪೋಸ್ಟ್ ಡಾಕ್ಟರೇಟ್	30,000/-

- ಪೌರಕಾರ್ಮಿಕರ ಕುಟುಂಬದವರು ಬಿ.ಇ & ಎಂ.ಬಿ.ಬಿ.ಎಸ್ ವಿದ್ಯಾರ್ಥಿಗಳಾಗಿದ್ದಲ್ಲಿ ಲ್ಯಾಪ್‌ಟಾಪ್ ನೀಡಲಾಗುತ್ತಿದೆ.
- ಪೌರಕಾರ್ಮಿಕರ ಕುಟುಂಬದವರು ಎಲ್.ಎಲ್.ಬಿ ಪದವೀಧರರಾಗಿದ್ದಲ್ಲಿ ಕಾನೂನು ಪುಸ್ತಕಗಳನ್ನು ರೂ. 20,000/-ಕ್ಕೆ ಖರೀದಿಸಿ ನೀಡಲಾಗುತ್ತಿದೆ.
- ಪೌರಕಾರ್ಮಿಕರ ಮಕ್ಕಳಿಗೆ ಉಚಿತವಾಗಿ COMPUTER AND SPOKEN ENGLISH TRAINING ತರಬೇತಿ ನೀಡಲಾಗುತ್ತಿದೆ.
- ಪೌರಕಾರ್ಮಿಕ ಮಕ್ಕಳ ಶಿಕ್ಷಣ ಹಾಗೂ ಉನ್ನತ ವ್ಯಾಸಂಗಕ್ಕೆ ಶಾಲಾ ಶುಲ್ಕವನ್ನು ಮರು ಪಾವತಿ ಮಾಡಲಾಗುತ್ತಿದೆ.
- ಹೆಚ್ಚು ಅಂಕಗಳಿಸಿದ ಪೌರಕಾರ್ಮಿಕ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

ನಅಇ 20 ಎಸಿಎಂ 2022 (ಇ)

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು